

ಮುಂದೆ ಅವಳ ಕೌಟುಂಬಿಕ ಬದುಕಿಗೆ ತೊಂದರೆಯಾಗಬಹುದೇ ಎನ್ನುವುದನ್ನೂ ಯೋಚಿಸಲಾರದ ಆತಂಕದ ಪರಿಸ್ಥಿತಿಯಲ್ಲಿ ಅವರಿದ್ದರು. ಅವರು ಮಾಡಬಹುದಾಗಿದ್ದುದು ಏನು?

4. ವಿದ್ಯಾರ್ಥಿ ನಿಲಯಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದ ಪ್ರಕರಣಗಳ ಬಗೆಗೆ ಆಗಾಗ ಓದುತ್ತಿರುತ್ತೇವೆ. ಹೀಗೆ ಪೊಲೀಸ್ ಠಾಣೆಯ ಮೆಟ್ಟಿಲೇರುವ ಪ್ರಕರಣಗಳು ಅತ್ಯಂತ ಕಡಿಮೆ. ಸಾಮಾಜಿಕ ಕಳಂಕ, ಪೊಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಜನಸಾಮಾನ್ಯರಲ್ಲಿ ಇರುವ ಅಪನಂಬಿಕೆ, ಅಲ್ಲಿ ನಡೆಯುವ ವಿಳಂಬ ಮುಂತಾದ ಕಾರಣಗಳಿಂದ ವರದಿಯಾಗದೆ ಮುಚ್ಚಿಹೋಗುವ ಪ್ರಕರಣಗಳು ಹತ್ತಾರು ಪಟ್ಟು ಹೆಚ್ಚಿರಬಹುದು. ಅಲ್ಲಲ್ಲೇ ಹೊಸಕಿಹಾಕಿರುವ ಇಂತಹ ಪ್ರಕರಣಗಳ ಬಗೆಗೆ ಅಂದಾಜು ಮಾಡುವುದು ಕೂಡ ಅಸಾಧ್ಯ.

5. ಧಾರ್ಮಿಕ ಸ್ಥಳಗಳಲ್ಲಿ ಸ್ತ್ರೀಯರ ಲೈಂಗಿಕ ಶೋಷಣೆ ಲಾಗಾಯ್ತಿನಿಂದಲೂ ನಡೆಯುತ್ತಲೇ ಬಂದಿದ್ದರೂ ಎಲ್ಲವನ್ನೂ ಭಯ, ದಬ್ಬಾಳಿಕೆ ಮುಂತಾದ ಅಸ್ತ್ರಗಳ ಪ್ರಯೋಗದಿಂದ ಮುಚ್ಚಿಹಾಕಲಾಗುತ್ತಿತ್ತು. ಒಬ್ಬ ರಾಮ್‌ರಹೀಮ್‌ನನ್ನು ಜೈಲಿಗೆ ಅಟ್ಟಲು ನಮ್ಮ ದುರ್ಬಲ ಆಡಳಿತ ವ್ಯವಸ್ಥೆ ಕಡಿಮೆ ಎಂದರೆ 20 ವರ್ಷಗಳನ್ನು ತೆಗೆದುಕೊಂಡಿದೆ. ಮೇಲ್ಮನವಿಗಳ ಸರಪಳಿ ಮುಗಿಯುವಷ್ಟರಲ್ಲಿ ಅಪರಾಧಿ ಇಹಲೋಕದ ಯಾತ್ರೆಯ ಅಂತಿಮ ಹಂತದಲ್ಲಿರಬಹುದು. ಹಿಂಸಾಚಾರಕ್ಕೆ

## ಭಾರತೀಯರ ದೃಷ್ಟಿಕೋನ

ನಾವೆಲ್ಲಾ ಒಂದು ವಿಪರ್ಯಾಸವನ್ನು ಗಮನಿಸಬೇಕು. ಬಟ್ಟೆಗಳನ್ನೇ ತೊಡದೆ ಅಥವಾ ಮಲಗುವ ಕೋಣೆಯಂತಹ ಖಾಸಗಿ ಸ್ಥಳಗಳೇ ಇಲ್ಲದಿದ್ದ ಶಿಲಾಯುಗದ ಮಾನವ, ಲೈಂಗಿಕ ಕ್ರಿಯೆಯನ್ನು ಬಹಿರಂಗವಾಗಿ ಮಾಡುತ್ತಿದ್ದಿರಲೇಬೇಕು. ಆಗ ಅದನ್ನು ಮಕ್ಕಳಿಂದ ಮುಚ್ಚಿಡಲು ಸಾಧ್ಯವಿರಲಿಲ್ಲ ಅಥವಾ ಮಕ್ಕಳಿಗೆ ಲೈಂಗಿಕತೆಯ ಬಗೆಗೆ ವೈಜ್ಞಾನಿಕವಾಗಿ ಶಿಕ್ಷಣ ಕೊಡುವ ಜ್ಞಾನ ಅಥವಾ ವ್ಯವಧಾನ ಅವರ ಬಳಿ ಇರಲಿಲ್ಲ. ಹಾಗಿದ್ದರೂ ಈಗಿನಷ್ಟು ಲೈಂಗಿಕ ಅಪರಾಧಗಳು, ತಪ್ಪು ತಿಳಿವಳಿಕೆಗಳು, ರೋಗರುಜಿನಗಳು ಇತ್ಯಾದಿ ಆಗ ಇದ್ದಿರಲಾರದು.

ಮಾನವ ಬಟ್ಟೆ ತೊಡಲು ಪ್ರಾರಂಭಿಸಿ, ಲೈಂಗಿಕ ಕ್ರಿಯೆಯನ್ನು ಖಾಸಗಿಯಾಗಿ ಮಾಡುವ ಅಭ್ಯಾಸ ಬೆಳೆಸಿಕೊಂಡ ಮೇಲೆಯೇ ಇವುಗಳೆಲ್ಲಾ ಹೆಚ್ಚಾಗುತ್ತಿವೆ. ಅಂದರೆ ನಾಗರಿಕತೆ ಬೆಳೆಯುತ್ತಾ ಬಂದಂತೆ ನಮ್ಮ ಲೈಂಗಿಕತೆಯ ತೊಂದರೆಗಳು ಹೆಚ್ಚಾಗುತ್ತಿವೆಯೇ? ಈಗಲೂ ಆಧುನಿಕ ನಾಗರಿಕತೆಯ ಸೋಂಕೇ ಇಲ್ಲದ ಆಫ್ರಿಕದ ಅಥವಾ ಅಂಡಮಾನ್‌ನ ಬುಡಕಟ್ಟು ಜನಾಂಗಗಳವರು ಗಂಡು ಹೆಣ್ಣಿನ ಸಮಾಗಮಕ್ಕಾಗಿ ಭಿನ್ನಭಿನ್ನ ಮಾದರಿಗಳನ್ನು ಅನುಸರಿಸುತ್ತಿರುವುದರಿಂದ ಲೈಂಗಿಕವಾಗಿ ನಮಗಿಂತ ಹೆಚ್ಚು ತೃಪ್ತಿಕರವಾಗಿ ಮತ್ತು ಆರೋಗ್ಯಕರವಾಗಿ ಬದುಕುತ್ತಿರಬಹುದೇ? ಹೆಚ್ಚಿನ ಸಂಶೋಧನೆಗಳು ಇವುಗಳ ಮೇಲೆ ಬೆಳಕು ಚೆಲ್ಲಬಹುದು.

ಪ್ರಾಚೀನ ಭಾರತದಲ್ಲಿ ಲೈಂಗಿಕತೆಯ ಬಗೆಗೆ ಅನಗತ್ಯ ಮುಚ್ಚುಮರೆಗಳಿರಲಿಲ್ಲ. ಗಣಪ, ಹನುಮರನ್ನು ಹೊರತಾಗಿಸಿದರೆ ಎಲ್ಲಾ ದೇವರುಗಳು, ಋಷಿಮುನಿಗಳು ವಿವಾಹಿತರು ಮತ್ತು ಎಲ್ಲಾ ಕಡೆ ಪತ್ನೀ ಸಮೇತರಾಗಿ ಕಾಣಿಸಿಕೊಂಡಿದ್ದಾರೆ. ಅವರ ನಡುವಿನ ಶೃಂಗಾರದ ವರ್ಣನೆಯಿಂದ ಅವರ ಮೇಲಿನ ಭಕ್ತಿಗೆ ಕುಂದುಬಂದಿಲ್ಲ. ಕಾಮದ ಅಧಿಪತಿಯಾದ ಮನ್ಮಥನಿಗೆ ಕೂಡ ಉನ್ನತ ಸ್ಥಾನವಿದೆ. ಸ್ತ್ರೀಪುರುಷರ ಮಿಲನದ ಬಗೆಗೆ ವಾತ್ಸಾಯನ ಬರೆದ ಕಾಮಸೂತ್ರ ಜಗತ್ತಿನ ಪ್ರಥಮ ವೈಜ್ಞಾನಿಕ ಮತ್ತು ಕಲಾತ್ಮಕ ಗ್ರಂಥ ಎಂದು ಗುರುತಿಸಲ್ಪಟ್ಟಿದೆ. ವಾತ್ಸಾಯನನ ಬಗೆಗೆ ಸ್ಪಷ್ಟ ಐತಿಹಾಸಿಕ ದಾಖಲೆಗಳಿಲ್ಲ. ಬ್ರಹ್ಮಚಾರಿಯಾಗಿದ್ದ ಅವನು ಇತರ ಗಂಡು– ಹೆಣ್ಣುಗಳ ಸಮಾಗಮವನ್ನು ಕದ್ದು ನೋಡುತ್ತಾ ಗ್ರಂಥರಚನೆ ಮಾಡಿದ ಎಂದು ಹಿಂದಿ ಚಲನಚಿತ್ರ 'ಉತ್ಸವ್'ನಲ್ಲಿ ತೋರಿಸಲಾಗಿದೆ.

ಲೈಂಗಿಕತೆಯನ್ನು ವೃತ್ತಿಯಾಗಿಸಿಕೊಂಡವರನ್ನೂ ಕೂಡ ಭಾರತೀಯರು ಮಾನವೀಯ ನೆಲೆಯಲ್ಲಿ ಗುರುತಿಸಿದ್ದಾರೆ. ದೇವಸ್ಥಾನ ಮತ್ತಿತರ ಧಾರ್ಮಿಕ ಸ್ಥಳಗಳಲ್ಲಿ ಮಿಥುನ ಶಿಲ್ಪಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇದು ಆರೋಗ್ಯಕರ ಲೈಂಗಿಕತೆ; ಧರ್ಮವಿರೋಧಿಯಲ್ಲ ಮತ್ತು ಲೈಂಗಿಕ ವಿಚಾರಗಳು ಸಾರ್ವಜನಿಕ ವೀಕ್ಷಣೆ ಮತ್ತು ಚರ್ಚೆಯಿಂದ ಹೊರತಲ್ಲ ಎನ್ನುವುದರ ಸೂಚನೆಯಾಗಿರಬಹುದೇ? ಅಥವಾ ಕಲೆ ಮತ್ತು ಸಾಹಿತ್ಯಗಳ ಮೂಲಕ ಲೈಂಗಿಕ ಶಿಕ್ಷಣ ನೀಡುವ ಮಾದರಿ ಇದಾಗಿರಬಹುದೇ?